ಸಹಾಯಕರನ್ನು ನೇಮಿಸುವ ಬಗ್ಗೆ 4537 ಕೃಷಿ ಸಹಾಯಕ ಹುದ್ದೆಗಳನ್ನು ಮಂಜೂರು ಮಾಡುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆ.

286 ಶ್ರೀ ಹ್ಯಾರೀಸ್ ಎನ್.ಎ
ಪಿ.ಎಂ.ನರೇಂದ್ರಸ್ವಾಮಿ(ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು)

ಅ) ಭಾಗ್ಯಲಕ್ಷ್ಮಿ ಯೋಜನೆಯ ಅನುಷ್ಠಾನದ ರೂಪುರೇಷೆಗಳೇನು;

ಮಾಹಿತಿಯನ್ನು ಅನುಬಂಧ–1 ರಲ್ಲಿ ನೀಡಿದೆ.

ಆ) ಯೋಜನೆಯ ಮೂಲಕ ಈವರೆಗೆ ಸೌಲಭ್ಯವನ್ನು ಪಡೆದ ಫಲಾನುಭವಿಗಳೆಷ್ಟು (ಜಿಲ್ಲಾವಾರು ವಿವರ ನೀಡುವುದು)

ಮಾಹಿತಿಯನ್ನು ಅನುಬಂಧ–2 ರಲ್ಲಿ ನೀಡಿದೆ.

ಇ) ಈ ಯೋಜನೆಗೆ ಪ್ರಸ್ತುತ ನಿಗದಿಪಡಿಸಿರುವ ಠೇವಣಿ ಮೊತ್ತ ಎಷ್ಟು; ಅದನ್ನು ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೆ (ವಿವರ ನೀಡುವುದು)?

ಸರ್ಕಾರದ ಆದೇಶ ಸಂ. ಮಮಇ 152 ಮಮಅ 2008 ದಿನಾಂಕ 14/08/08 ರಂತೆ ಭಾಗ್ಯಲಕ್ಷ್ಮಿ ಯೋಜನೆಯನ್ನು ಭಾಗಶಃ ಮಾರ್ಪಡಿಸಲಾಗಿರುತ್ತದೆ. ಪರಿಷ್ಕರಿಸಲಾದ ಯೋಜನೆಯು ದಿನಾಂಕ: 01/08/08 ರಂದು ಹಾಗೂ ನಂತರ ಜನಿಸಿದ ಮಕ್ಕಳಿಗೆ ಅನ್ವಯಿಸುವಂತೆ ರೂ.10,000/–ಗಳ ಬದಲಾಗಿ ಯೋಜನೆಯಡಿ ನೋಂದಣಿಯಾದ ಕುಟುಂಬದ ಮೊದಲನೆಯ ಹೆಣ್ಣು ಮಗುವಿನ ಹೆಸರಿನಲ್ಲಿ ರೂ.19300/– ಹಾಗೂ ಎರಡನೆಯ ಹೆಣ್ಣು ಮಗುವಿನ ಹೆಸರಿನಲ್ಲಿ ರೂ.18,350/– ಗಳ ಮೊತ್ತವನ್ನು ಪಾಲುದಾರ ಹಣಕಾಸು ಸಂಸ್ಥೆಯಲ್ಲಿ ಠೇವಣಿಯಲ್ಲಿರಿಸಲು ಸರ್ಕಾರ ಆದೇಶ ಹೊರಡಿಸಲಾಗಿದೆ.

ಪ್ರಸ್ತುತ ಠೇವಣಿ ಮೊತ್ತವನ್ನು ಹೆಚ್ಚಿಸುವ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.

<u>ಚುಕ್ಕೆ ಇಲ್ಲದ ಪ್ರಶ್ನೆ ಸಂಖ್ಯೆ: 286 ಕ್ಕೆ</u>
<u>ಅನುಬಂಧ–1</u>

ರಾಜ್ಯ ಸರ್ಕಾರಕ್ಕೆ ಹೆಣ್ಣು ಮಗುವಿನ ಬಗ್ಗೆ ಇರುವ ಕಾಳಜಿ ವ್ಯಕ್ತಪಡಿಸಲು ಹಾಗೂ ಹೆಣ್ಣು ಮಗುವಿನ ವಿರುದ್ಧ ಸಮಾಜದಲ್ಲಿರುವ ಧೋರಣೆಯನ್ನು ಬದಲಿಸಲು 2006–07ನೇ ಸಾಲಿನಿಂದ ಭಾಗ್ಯಲಕ್ಷ್ಮಿ ಎಂಬ ಕಲ್ಯಾಣ ಯೋಜನೆಯನ್ನು ರಾಜ್ಯ ಸರ್ಕಾರವು ಜಾರಿಗೆ ತಂದಿರುತ್ತದೆ.

ಲಿಂಗ ಪ್ರಮಾಣ ವ್ಯತ್ಯಾಸವನ್ನು ಕಡಿಮೆಗೊಳಿಸುವುದು, ಬಾಲ ಕಾರ್ಮಿಕತೆ, ಹೆಣ್ಣು ಭ್ರೂಣ ಹತ್ಯೆ, ಬಾಲ್ಯ ವಿವಾಹ ಮುಂತಾದ ಸಾಮಾಜಿಕ ಪಿಡುಗುಗಳನ್ನು

ತಡೆಗಟ್ಟಿ ಹೆಣ್ಣು ಮಕ್ಕಳ ಆರೋಗ್ಯ, ಶಿಕ್ಷಣ, ಪೋಷಣೆ ಹಾಗೂ ಸರ್ವಾಂಗೀಣ ಅಭಿವೃದ್ಧಿಗೆ ನೆರವಾಗುವುದು ಈ ಯೋಜನೆಯ ಉದ್ದೇಶವಾಗಿದೆ.

ದಿನಾಂಕ 31/03/2006ರ ನಂತರ ಜನಿಸಿದ ಹೆಣ್ಣು ಮಗುವಿನ ಹೆಸರಿನಲ್ಲಿ ರೂ.10,000ಗಳ ಠೇವಣಿಯನ್ನು ಜೀವ ವಿಮಾ ನಿಗಮದಲ್ಲಿ ಇಡಲಾಗುವುದು. ಈ ಹೆಣ್ಣು ಮಗು ಬೆಳೆದು 18 ವರ್ಷದ ಪ್ರಾಯಕ್ಕೆ ಬಂದಾಗ ಠೇವಣಿ ಮತ್ತು ಬಡ್ಡಿ ಸೇರಿ ರೂ.34,751/– ಆಕೆಗೆ ನೀಡಲಾಗುವುದು. ಈ ಯೋಜನೆಯಡಿ ಅದೇ ಕುಟುಂಬದ ಎರಡನೆಯ ಮಗು ನೋಂದಣಿಯಾದಲ್ಲಿ ಆಕೆಗೆ ರೂ.40,918/–ಗಳನ್ನು ನೀಡಲಾಗುವುದು.

ಈ ಯೋಜನೆಯು ಕುಟುಂಬದ ಇಬ್ಬರು ಹೆಣ್ಣು ಮಕ್ಕಳಿಗೆ ಸೀಮಿತಗೊಳಿಸಲಾಗಿದ್ದು, 1ನೇ ತರಗತಿಯಿಂದ ಪದವಿಪೂರ್ವ ಶಿಕ್ಷಣದವರೆಗೂ ಹೆಣ್ಣು ಮಗುವಿನ ವ್ಯಾಸಾಂಗಕ್ಕಾಗಿ ವಾರ್ಷಿಕ ವಿದ್ಯಾರ್ಥಿ ವೇತನ ರೂ.300 ರಿಂದ ರೂ.1,000 ವರೆಗೆ ನೀಡಲಾಗುವುದು.

ಹೆಣ್ಣು ಮಗು ಕಾಯಿಲೆಗೀಡಾದಲ್ಲಿ ಜನನದಿಂದ 18 ವರ್ಷಗಳವರೆಗೆ ಪ್ರತಿ ವರ್ಷ ಗರಿಷ್ಠ ಮೊತ್ತ ರೂ.25,000 ಆರೋಗ್ಯ ಸಂಬಂಧಪಟ್ಟಂತೆ ನೀಡಲಾಗುವುದು. ಕುಟುಂಬದಲ್ಲಿ ವಿಮೆ ಮಾಡಿದ ವ್ಯಕ್ತಿಯು ಸ್ವಾಭಾವಿಕ ಮರಣ ಹೊಂದಿದಲ್ಲಿ ಆ ಕುಟುಂಬಕ್ಕೆ ರೂ.42,500/–ಗಳನ್ನು ಅಥವಾ ಆ ವ್ಯಕ್ತಿಯು ಅಪಘಾತದಲ್ಲಿ ಮರಣ ಹೊಂದಿದಲ್ಲಿ ರೂ.1,00,000/– ನೀಡಲಾಗುವುದು.

ಯೋಜನೆಯಡಿ ಆಯ್ಕೆಯಾದ ಹೆಣ್ಣು ಮಗುವಿಗೆ ಯೋಜನೆಯಲ್ಲಿ ತಿಳಿಸಿರುವ ಈ ಕೆಳಕಂಡ ಅರ್ಹತೆ, ಮಾನದಂಡಗಳನ್ನು ಪೂರೈಸಿದಲ್ಲಿ ಮಾತ್ರ ಸೌಲಭ್ಯ ನೀಡಲಾಗುವುದು.

- ಮಗುವಿನ ಜನನವನ್ನು ಕಡ್ಡಾಯವಾಗಿ ನೋಂದಣಿ ಮಾಡಬೇಕು.
- ಆರೋಗ್ಯ ಇಲಾಖೆಯಿಂದ ಮಗುವಿಗೆ ರೋಗ ನಿರೋಧಕ ಲಸಿಕೆ ಹಾಕಿಸಬೇಕು.
- 6 ತಿಂಗಳಿಂದ 6 ವರ್ಷದವರೆಗೆ ನಿರಂತರವಾಗಿ ಅಂಗನವಾಡಿ/ಶಾಲಾಪೂರ್ವ ಶಿಕ್ಷಣಕ್ಕೆ ದಾಖಲಾಗಬೇಕು.
- ಶಿಕ್ಷಣ ಇಲಾಖೆಯಿಂದ ಅಂಗೀಕರಿಸಲ್ಪಟ್ಟ ಶಾಲೆಗಳಲ್ಲಿ ದಾಖಲಿಸಬೇಕು.
- ಕನಿಷ್ಠ 8ನೇ ತರಗತಿಯವರೆಗೆ ವ್ಯಾಸಂಗ ಮಾಡಿಸಬೇಕು.
- 3 ಮಕ್ಕಳಿದ್ದು ತಂದೆ/ತಾಯಿ ಶಾಶ್ವತ ಕುಟುಂಬ ಯೋಜನೆ ಪದ್ಧತಿ ಅಳವಡಿಸಿಕೊಳ್ಳಬೇಕು.
- ಬಾಲ ಕಾರ್ಮಿಕ ಆಗಿರಬಾರದು.
- 18 ವರ್ಷಗಳವರೆಗೆ ವಿವಾಹವಾಗಬಾರದು.

ಸರ್ಕಾರದ ಆದೇಶ ಸಂ. ಮಮಇ 152 ಮಮಅ 2008 ದಿನಾಂಕ 14/08/08ರಂತೆ ಭಾಗ್ಯಲಕ್ಷ್ಮಿ ಯೋಜನೆಯನ್ನು ಭಾಗಶಃ ಮಾರ್ಪಡಿಸಲಾಗಿರುತ್ತದೆ. ಪರಿಷ್ಕರಿಸಲಾದ ಯೋಜನೆಯು ದಿನಾಂಕ 01/08/08ರಂದು ಹಾಗೂ ನಂತರ ಜನಿಸಿದ ಮಕ್ಕಳಿಗೆ ಅನ್ವಯಿಸುತ್ತದೆ.

- ರೂ.10,000/–ಗಳ ಬದಲಾಗಿ ಯೋಜನೆಯಡಿ ನೋಂದಣಿಯಾದ ಕುಟುಂಬದ ಮೊದಲನೇಯ ಮಗುವಿನ ಹೆಸರಿನಲ್ಲಿ ರೂ.19300/– ಹಾಗೂ ಎರಡನೇಯ ಮಗುವಿನ ಹೆಸರಿನಲ್ಲಿ ರೂ.18,350/–ಗಳ ಮೊತ್ತವನ್ನು ಪಾಲುದಾರ ಹಣಕಾಸು ಸಂಸ್ಥೆಯಲ್ಲಿ ಠೇವಣಿಯಲ್ಲಿರಿಸಿ, 18 ವರ್ಷಗಳು ಪೂರ್ಣಗೊಂಡಾಗ ಕುಟುಂಬದ ಮೊದಲನೇಯ ಫಲಾನುಭವಿಗೆ ರೂ.1,00,097/– ಹಾಗೂ ಎರಡನೇ ಫಲಾನುಭವಿಗೆ ರೂ.1,00,052/– ಪರಿಪಕ್ವ ಮೊತ್ತ ದೊರೆಯುತ್ತದೆ.
- ಫಲಾನುಭವಿಯು 15 ವರ್ಷ ತಲುಪಿದಾಗ ಹಾಗೂ 10ನೇ ತರಗತಿಯಲ್ಲಿ ಉತ್ತೀರ್ಣಳಾಗಿ, ಮುಂದಿನ ವಿದ್ಯಾಭ್ಯಾಸವನ್ನು ಕೈಗೊಳ್ಳಲು ಆಸಕ್ತಿ ಇದ್ದಲ್ಲಿ, ಬಾಂಡ್‌ನ್ನು ಅಂಗೀಕೃತ ಬ್ಯಾಂಕ್‌ಗಳಲ್ಲಿ ಅಡಮಾನವಿರಿಸಿ ರೂ.50,000/– ಗಳ ಸಾಲನನ್ನು ಪಡೆಯಬಹುದಾಗಿರುತ್ತದೆ.
- ವಿದ್ಯಾರ್ಥಿ ವೇತನ ಹಾಗೂ ವೈದ್ಯಕೀಯ ವಿಮಾ ಸೌಲಭ್ಯಗಳನ್ನು ಕೈಬಿಡಲಾಗಿದೆ.
- ಫಲಾನುಭವಿಯ ತಂದೆ/ತಾಯಿ/ಪೋಷಕರ ಗ್ರಾಮೀಣ ಭೂರಹಿತ ಕುಟುಂಬಕ್ಕೆ ಸೇರಿದ್ದಲ್ಲಿ ಜನಶ್ರೀ ಬೀಮಾ ಯೋಜನೆಯಡಿಯಲ್ಲಿ ವಿಮೆ ಸೌಲಭ್ಯ ಪಡೆಯಲು ಅರ್ಹರಾಗಿರುತ್ತಾರೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 286 ಕ್ಕೆ
ಅನುಬಂಧ–2

"ಭಾಗ್ಯಲಕ್ಷ್ಮಿ" ಯೋಜನೆಯಡಿ ಈವರೆಗೆ ಸೌಲಭ್ಯವನ್ನು ಪಡೆದ ಫಲಾನುಭವಿಗಳ ವಿವರ (ಜಿಲ್ಲಾವಾರು)

ಕ್ರ.ಸಂ.	ಜಿಲ್ಲೆಯ ಹೆಸರು	ಫಲಾನುಭವಿಗಳ ಸಂಖ್ಯೆ
1	ಬಾಗಲಕೋಟೆ	12000
2	ಬೆಂಗಳೂರು ಗ್ರಾ	4899
3	ಬೆಂಗಳೂರು ನ	24804
4	ಬೆಳಗಾಂ	32833
5	ಬಳ್ಳಾರಿ	14655

6	ಬೀದರ್	5828
7	ಬಿಜಾಪುರ	16349
8	ಚಾಮರಾಜನಗರ	6953
9	ಚಿಕ್ಕಬಳ್ಳಾಪುರ	5305
10	ಚಿಕ್ಕಮಗಳೂರು	5573
11	ಚಿತ್ರದುರ್ಗ	8613
12	ದಕ್ಷಿಣ ಕನ್ನಡ	1645
13	ದಾವಣಗೆರೆ	10036
14	ಧಾರವಾಡ	7483
15	ಗದಗ	8038
16	ಗುಲ್ಬರ್ಗ	15065
17	ಹಾಸನ	9146
18	ಹಾವೇರಿ	11046
19	ಕೊಡಗು	2169
20	ಕೋಲಾರ	8150
21	ಕೊಪ್ಪಳ	9028
22	ಮಂಡ್ಯ	10520
23	ಮೈಸೂರು	16454
24	ರಾಯಚೂರು	13209
25	ರಾಮನಗರ	5371
26	ಶಿವಮೊಗ್ಗ	9040
27	ತುಮಕೂರು	14222
28	ಉಡುಪಿ	3498
29	ಉತ್ತರ ಕನ್ನಡ	5884
	ಒಟ್ಟು	**297816**

289 ಶ್ರೀ ಹ್ಯಾರೀಸ್ ಎನ್.ಎ
ಲಕ್ಷ್ಮಣ ಸ. ಸವದಿ(ಸಹಕಾರ ಸಚಿವರು)

ಅ) ರಾಜ್ಯದಲ್ಲಿ ಸಾಲ ಮನ್ನಾ ಯೋಜನೆಯನ್ನು ಅನುಷ್ಠಾನಗೊಳಿಸುವ ಮೂಲಕ ಸೌಲಭ್ಯವನ್ನು ಪಡೆದ ಫಲಾನುಭವಿಗಳೆಷ್ಟು?